ಈ ಲೇಖನದ ವಿಷಯಾನುಕ್ರಮಣಿಕೆ


ಬಯಲಶೌಚದ ವೈಜ್ಞಾನಿಕತೆ 2

ನಾಗರೀಕಯುಗದಲ್ಲಿ ಮಲಮೂತ್ರಗಳ ನದಿಗಳು 3

ಮಲವಿಸರ್ಜನೆಯ ಪ್ರದೇಶ 8

ಮಲವಿಸರ್ಜನೆಯ ಕ್ರಮ 10

ಮನೆಯ ನೈಋತ್ಯದಲ್ಲಿ ಶೌಚಾಲಯವಿರಬಾರದು 17

## ಬಯಲಶೌಚದ ವೈಜ್ಞಾನಿಕತೆ

ನಮ್ಮ ಧರ್ಮಶಾಸ್ತ್ರಗಳು ಮನೆಯ ಒಳಗಡೆ ಶೌಚಾಲಯವಿರಬಾರದು ಎಂದು ಹೇಳುತ್ತವೆ. ಮನೆಯ ಹೊರಗಡೆ ಪ್ರಾಂಗಣದಲ್ಲಿ (ಕಾಂಪೌಂಡಿನ ಒಳಗಡೆ) ಕಟ್ಟಿಸಲಿಕ್ಕೆ ಅಡ್ಡಿಯಿಲ್ಲ. ಆದರೆ ಮನೆಯ ಒಳಗಡೆ ಶೌಚವನ್ನು ಶಾಸ್ತ್ರ ನಿಷೇಧಿಸುತ್ತದೆ.

**"ಬಹಿಃಸ್ಥಲೇ ಪ್ರಕುರ್ವೀತ ಮಲಮೂತ್ರವಿಸರ್ಜನಮ್"**

ಇವತ್ತು ಹಳ್ಳಿಗಳಲ್ಲಿ ಇನ್ನೂ ಬಳಕೆಯಲ್ಲಿರುವ ಬಯಲಶೌಚ ಖಂಡಿತ ಶಾಸ್ತ್ರೀಯವಲ್ಲ. ನಮ್ಮ ಶಾಸ್ತ್ರ ಏನೇ ವಿಧಿಸಿದರೂ ಅದು ಪ್ರಕೃತಿಗೆ ತುಂಬ ಹೊಂದಿಕೊಳ್ಳುವಂತದ್ದು. ಇಂದು ಹಳ್ಳಿಗಳಲ್ಲಿ ಬಳಕೆಯಿರುವ ಬಯಲಶೌಚ ಶಾಸ್ತ್ರಸಮ್ಮತವೂ ಅಲ್ಲ, ಸಮಾಜಸಮ್ಮತವೂ ಅಲ್ಲ.

## ನಾಗರೀಕಯುಗದಲ್ಲಿ ಮಲಮೂತ್ರಗಳ ನದಿಗಳು

ಮನೆಯ ಹೊರಗಡೆ ಹೋಗಿ ಮಲಮೂತ್ರಗಳ ವಿಸರ್ಜನೆ ಮಾಡಿ ಬರುವದು ಇವತ್ತಿನ ಜನಕ್ಕೆ ಅಸಹ್ಯ ಎಂದೆನಿಸುತ್ತದೆ. ಆದರೆ ದಿಲ್ಲಿಯ ಜನ, ಬೆಂಗಳೂರಿನ ಜನ, ಎಲ್ಲ ಪಟ್ಟಣಗಳ ಜನ ಒಮ್ಮೆ ತಮ್ಮ ಊರಿನ ಶೌಚದ ಮಲಿನವೆಲ್ಲ ಎಲ್ಲಿ ಹೋಗುತ್ತಿದೆ ಒಮ್ಮೆ ನೋಡಿಬರಬೇಕು. ಆ ಬಳಿಕ ಅಸಹ್ಯದ ಬಗ್ಗೆ ಮಾತನಾಡಬೇಕು.

ಬೆಂಗಳೂರಿನ ಬಳಿ ಕನಕಪುರ ಇದೆ. ಅರ್ಕಾವತಿ ನದಿಯ ದಂಡೆಯ ಊರು.  1996 ರಲ್ಲಿ ನಾನು ಅಲ್ಲಿಗೆ ಹೋದಾಗ ಅರ್ಕಾವತಿಯಲ್ಲಿ ಸ್ನಾನ ಮಾಡಿ, ಆಹ್ನೀಕ ಮುಗಿಸಿ ನೀರು ಕುಡಿದು ಬಂದಿದ್ದೆ.

ಈಗ ಕಾವೇರಿಯ ತೀರದಲ್ಲಿರುವ ನಾನು ಅದೇ ಕನಕಪುರದ ಮೇಲೆ ಹಾದು ಬೆಂಗಳೂರಿಗೆ ಬರಬೇಕು. ಅರ್ಕಾವತಿಯ ಸೇತುವೆಯ ಮೇಲೆಯೇ ಬರಬೇಕು. ಆದರೆ ಕೆಳಗೆ ಹರಿಯುತ್ತಿರುವದು ಅರ್ಕಾವತಿಯಲ್ಲ, ಬೆಂಗಳೂರಿನ ಚರಂಡಿಯ ನೀರು.

ವೃಷಭಾವತಿಯನ್ನು ಪೂರ್ಣ ಚರಂಡಿ ಮಾಡಿದ ಬೆಂಗಳೂರಿನ ಮಲಿನ ಈಗ ಅರ್ಕಾವತಿಯನ್ನೂ ಸೇರುತ್ತಿದೆ. ಆ ನಂತರ ಕಾವೇರಿಯನ್ನು. ಅದೇ ಕಾವೇರಿಯ ನೀರು ಬೆಂಗಳೂರಿಗೆ ಕುಡಿಯುವ ನೀರಾಗಿ ಸರಬರಾಜಾಗುತ್ತಿದೆ!

ಹಾಗೆಯೇ, ಮಥುರೆಯ ಬಳಿಯಲ್ಲಿ ಯಮುನೆ ಅಕ್ಷರಶಃ ಗಟಾರ. ಸಾಂಗ್ಲಿಯ ಬಳಿಯ ಕೃಷ್ಣಾ, ನಾಸಿಕದ ತಪೋವನದ ಬಳಿಯ ಗೋದಾವರಿ ಎಲ್ಲದರಲ್ಲಿಯೂ ಆಯಾ ಊರಿನ ಮಲಮೂತ್ರಗಳು ಹರಿದು ಹೋಗುತ್ತಿವೆ.

ಹಿಂದೆ ಮನೆಗಳನ್ನು ಕಟ್ಟಿಸಬೇಕಾದರೆ ಜನ ತಮ್ಮತಮ್ಮ ಮನೆಯಲ್ಲಿಯೇ ಪಿಟ್ಟುಗಳನ್ನು ಮಾಡಿಸಿ ಮಲಿನವನ್ನು ಭೂಮಿಗೆ ಸೇರಿಸುತ್ತಿದ್ದರು. ಭೂಮಿಯಲ್ಲಿ ಸಹಜವಾಗಿ ಶೋಧಕತ್ವಗುಣವಿದೆ. ಅದು ಅಲ್ಲಿ ಇಂಗುತ್ತಿತ್ತು. ಆದರೆ ಈಗ, ನಾಗರೀಕತೆಯ ಹೆಸರಿನಲ್ಲಿ ಇಡಿಯ ಊರಿನ ಮಲಿನವನ್ನು ಒಳಚರಂಡಿಯ ಮೂಲಕ ಹರಿಸುತ್ತಾರೆ. ಅದನ್ನು ಹತ್ತಿರದ ಕೆರೆ ನದಿಗಳಿಗೆ ಸೇರಿಸುತ್ತಾರೆ. ಇದು ಅಭಿವೃದ್ಧಿಯಾ?

ಹತ್ತು ವರ್ಷಗಳ ಹಿಂದೆ ತಿರುಮಕೂಡಲಿನ ಕಾವೇರಿಯಲ್ಲಿ ನೆಲ ಕಾಣಿಸುವಷ್ಟು ಸ್ವಚ್ಛತೆ ಇರುತ್ತಿತ್ತು. ತೆಪ್ಪಗಳಲ್ಲಿ ಸಂಗಮದ ಸ್ಫಟಿಕಸರೋವರದ ಬಳಿಗೆ ಹೋದರೆ ಸ್ವಚ್ಛ ನೀರಿನಲ್ಲಿ ಅಲ್ಲಿರುವ ಕಂಬ ಕಾಣಿಸುತ್ತಿತ್ತು. ನರಸೀಪುರ ಅಭಿವೃದ್ಧಿಯಲ್ಲಿ ಒಂದು ಹೆಜ್ಜೆ ಮುಂದಕ್ಕಿಟ್ಟಿತು. ಪಿಟ್ಟುಗಳನ್ನು ತೆಗೆಸಿ ಒಳಚರಂಡಿ ಮಾಡಿಸಿ ಇಡಿಯ ಊರಿನ ಮಲವನ್ನು ಕಾವೇರಿಗೆ ಬಿಟ್ಟರು. ಈಗ ಕಾವೇರಿಯೂ ಕಲುಷಿತ. ಇದೇ ಕಾವೇರಿಯ ನೀರು ಬೆಂಗಳೂರಿಗೆ ಕುಡಿಯಲು ಸರಬರಾಜಾಗುತ್ತದೆ. ನರಸೀಪುರ ಒಂದೇ ಅಲ್ಲ, ಕುಶಾಲನಗರದಿಂದ ಆರಂಭಿಸಿ ಶ್ರೀರಂಗಪಟ್ಟಣ, ಬನ್ನೂರುಗಳನ್ನು ಒಳಗೊಂಡು ಸತ್ಯಾಗಾಲದ ವರೆಗಿನ ಬಹುತೇಕ ಎಲ್ಲ ಊರುಗಳ ಮಲವೂ ಕಾವೇರಿಯನ್ನೇ ಸೇರುತ್ತಿವೆ.

ನಾನು ಈ ಲೇಖನವನ್ನು ಬರೆಯುತ್ತಿರುವದು 2016ರಲ್ಲಿ. ಇನ್ನು ಐವತ್ತು ವರ್ಷಗಳ ನಂತರ — ಅಥವಾ ಇನ್ನೂ ಮುಂಚೆಯಾದರೂ ಆಶ್ಚರ್ಯವಿಲ್ಲ — ನಮ್ಮ ದೇಶದಲ್ಲಿ ಚರಂಡಿಯ ನೀರನ್ನೇ Recycle ಮಾಡಿ ಕುಡಿಯುವ ಅನಿವಾರ್ಯತೆ

ಇರುತ್ತದೆ. ಸಂಶಯವಿಲ್ಲ. ಕಾರಣ, ನೀರಿನ ಮೂಲವನ್ನೇ ಮನುಷ್ಯ ವಿನಾಶ ಮಾಡುತ್ತಿದ್ದಾನೆ.

ಈ ಮನೆಯ ಟಾಯ್ಲೆಟ್ಟಿನ ಪರಿಕಲ್ಪನೆ ಬಂದು ಮೂರ್ನಾಲ್ಕು ದಶಕಗಳಾಗಿವೆ. ಅಷ್ಟರಲ್ಲಿಯೇ ಇಂತಹ ಬೃಹದಾಕಾರದ ಸಮಸ್ಯೆ. ಪ್ರತಿಯೊಂದು ಪಟ್ಟಣದ ತ್ಯಾಜ್ಯಗಳು ಮಲಮೂತ್ರಗಳ ನದಿಯಾಗಿ ಹರಿಯುತ್ತಿದೆ. ಅದಕ್ಕೆ ಕೈಗಾರಿಕೆಯ ತ್ಯಾಜ್ಯವೂ ಸೇರಿ ವಿಷದ ನದಿ ಹರಿಯುತ್ತಿದೆ.

ಆದರೆ ನಮ್ಮ ಹಿಂದಿನವರು ಈ ಸಮಸ್ಯೆಯನ್ನು ಎಂದಿಗೂ ಎದುರಿಸಲಿಲ್ಲ. ತೀರ ಮನೆಯ ಒಳಗಡಯೇ ಶೌಚಾಲಯವನ್ನು ಕಟ್ಟುವದನ್ನು ಧರ್ಮಶಾಸ್ತ್ರ ನಿಷೇಧಿಸಿದರೂ ಮನೆಯ ಕಾಂಪೌಂಡಿನೊಳಗೆ ಶೌಚಾಲಯವನ್ನು ಕಟ್ಟುವದನ್ನು ವಾಸ್ತುಶಾಸ್ತ್ರಗಳು ವಿಧಿಸುತ್ತವೆ. ರಾಜರ ಅರಮನೆಗಳ, ದೊಡ್ಡದೊಡ್ಡ ಭವನಗಳ ವಿನ್ಯಾಸದಲ್ಲಿ ನಾವದನ್ನು ಸ್ಪಷ್ಟವಾಗಿ ಕಾಣುತ್ತೇವೆ. ಆದರೆ, ಆ ಶೌಚಾಲಯಗಳ ಮಲಿನ ಕಾಂಪೌಂಡನ್ನು ದಾಟಬಾರದು. ಕಾಂಪೌಂಡಿನ ಒಳಗೇ ಗುಂಡಿಯನ್ನು

ತೋಡಿ ಅದರೊಳಗೆ ಮಲಿನ ಇಂಗುವಂತೆ ಮಾಡಬೇಕು.

ವಸ್ತುಸ್ಥಿತಿಯಲ್ಲಿ ಇದೂ ಸಹ  ಎರಡನೆಯ ಪಕ್ಷ. ಹೆಣ್ಣುಮಕ್ಕಳಿಗಾಗಿ, ಮಕ್ಕಳಿಗಾಗಿ, ರೋಗಿಗಳಿಗಾಗಿ, ಹಗಲಿನ ಶೌಚಕ್ಕಾಗಿ ನಿರ್ಮಾಣವಾದ ಪಕ್ಷ.

ಶಾಸ್ತ್ರ ತಿಳಿಸುವದು ಬಹಿಃಶೌಚವನ್ನು. ಇದರ ವೈಜ್ಞಾನಿಕತೆಯ ಕುರಿತು ಬರೆಯುತ್ತೇನೆ. ಮನಸ್ಸಿನಲ್ಲಿ ಯಾವ ಪೂರ್ವಾಗ್ರಹವಿಲ್ಲದೇ ಒಮ್ಮೆ ಓದಿ. ನಮ್ಮ ಹಿಂದಿನವರು ಪ್ರಕೃತಿಗೆ ಅದೆಷ್ಟು ಆಪ್ಯಾಯಮಾನರಾಗಿ ಬದುಕುತ್ತಿದ್ದರು ಎಂದು ಅರ್ಥವಾಗುತ್ತದೆ. ನಿಮ್ಮ ಮನಸ್ಸಿನಲ್ಲಿ ಮೂಡುವ ಎಲ್ಲ ಪ್ರಶ್ನೆಗಳಿಗೆ ಉತ್ತರಿಸುತ್ತ ಹೋಗುತ್ತೇನೆ. ಸಾವಧಾನವಾಗಿ ಓದಿ.

ಒಂದು ಮಾತನ್ನು ಮೊದಲೇ ಹೇಳಿಬಿಡುತ್ತೇನೆ. ನಮ್ಮ ಪ್ರಾಚೀನರ ಜೀವನದ ಶೈಲಿಯನ್ನು ಇವತ್ತಿಗೆ ರೂಢಿಸಿಕೊಳ್ಳಲು ಸಾಧ್ಯವೇ ಇಲ್ಲದಷ್ಟು ನಾವು ಅಧಃಪಾತಕ್ಕಿಳಿದಿದ್ದೇವೆ. (ಅಥವಾ ಇವತ್ತಿನವರ ಭಾಷೆಯಲ್ಲಿ ಮುಂದುವರೆದಿದ್ದೇವೆ!) ನಮ್ಮ

ಪ್ರಾಚೀನರ ಮಲಮೂತ್ರವಿಸರ್ಜನೆಯ ಪದ್ಧತಿಯನ್ನು ಇವತ್ತಿಗೆ ರೂಢಿಸಿಕೊಳ್ಳಿ ಎಂದು ಹೇಳಲೂ ನಾನು ಹೊರಟಿಲ್ಲ. ಆದರೆ ಮಲಮೂತ್ರವಿಸರ್ಜನೆಯಂತಹ ವಿಷಯದಲ್ಲಿಯೂ ಅವರೆಷ್ಟು ಪ್ರಕೃತಿಗೆ ಆಪ್ಯಾಯಮಾನರಾಗಿ ಬದುಕುತ್ತಿದ್ದರು ಎನ್ನುವದನ್ನು ತಿಳಿಸಲಿಕ್ಕೆ ಮಾತ್ರ ಪ್ರಯತ್ನಿಸುತ್ತಿದ್ದೇನೆ.

## ಮಲವಿಸರ್ಜನೆಯ ಪ್ರದೇಶ

ಬೆಳಗಿನ ಜಾವದಲ್ಲಿ ಮತ್ತು ರಾತ್ರಿಯಲ್ಲಿ ಮಲವಿಸರ್ಜನೆಗಾಗಿ ಗ್ರಾಮದ ಹೊರಗೆ ಹೋಗಬೇಕು. ಅದೂ ಸಹ ನೈಋತ್ಯ ದಿಕ್ಕಿಗೆ ಹೋಗಬೇಕು. (ಮನೆಯ ನೈಋತ್ಯದಲ್ಲಿ ಶೌಚಾಲಯವಿರಬಾರದು ಎನ್ನುವದನ್ನು ಕಡೆಯಲ್ಲಿ ತಿಳಿಸುತ್ತೇನೆ.)

ಪ್ರತೀ ಗ್ರಾಮದ ನೈಋತ್ಯ ದಿಕ್ಕಿನಲ್ಲಿ ಮಲವಿಸರ್ಜನೆಗಾಗಿ ಸ್ಥಳವಿರುತ್ತಿತ್ತು.

ದಾರಿಯಲ್ಲಿ ಮಲವಿಸರ್ಜನೆ ಮಾಡಬಾರದು. ಉತ್ತ ಹೊಲದಲ್ಲಿ ಮಲವಿಸರ್ಜನೆ ಮಾಡಬಾರದು. ನಾಲ್ಕುಜನ ಸೇರುವೆಡೆ ಮಲವಿಸರ್ಜನೆ ಮಾಡಬಾರದು. ನದಿಯಲ್ಲಿ, ಕೆರೆಗಳಲ್ಲಿ ಮಲವಿಸರ್ಜನೆ ಮಾಡಬಾರದು[1]. ನದೀ-ಕೆರೆಗಳ ತೀರದಲ್ಲಿ ಮಲವಿಸರ್ಜನೆ ಮಾಡಬಾರದು. ಈ ರೀತಿಯ ನಿಯಮಗಳೊಂದಿಗೆ ನಮ್ಮ ಪ್ರಾಚೀನರು ಬದುಕುತ್ತಿದ್ದರು.

ವಾಯುಪುರಾಣದ  ಈ ವಾಕ್ಯವನ್ನು ಗಮನಿಸಿ —

**ನ ಗೋಷ್ಠೇ ನ ಶುಭೇ ದೇಶೇ**
**ನ ವನೇ ಕೇವಲಸ್ಥಲೇ ।**
**ನ ವಲ್ಮೀಕೇ ನ ವಾ ಕೂಪೇ**
**ನ ಚ್ಛಾಯಾಯಾಂ ನ ಪದ್ಧತೌ ।**
**ನದೀತೀರೇ ನ ಕರ್ತವ್ಯಂ**
**ಮಲಮೂತ್ರವಿಸರ್ಜನಮ್ ।**

---

[1] ನದಿಗಳಲ್ಲಿ ಮಲಮೂತ್ರವಿಸರ್ಜನೆ ಮಾಡುವದರಿಂದ ಒಬ್ಬ ಜ್ಞಾನಿಯನ್ನು ಕೊಂದಷ್ಟೇ ಪಾಪ — ಬ್ರಹ್ಮಹತ್ಯೆ — ಬರುತ್ತದೆ ಎಂದು ಮಹಾಭಾರತ ತಿಳಿಸುತ್ತದೆ.

ಮತ್ತೊಬ್ಬರು ಸ್ವಚ್ಛ ಮಾಡಿಟ್ಟ ಪ್ರದೇಶದಲ್ಲಿ, ಶುಭವಾದ ಪ್ರದೇಶದಲ್ಲಿ, ಉದ್ಯಾನವನದಲ್ಲಿ, ಬರಿಯ ನೆಲದ ಮೇಲೆ (ಗುಂಡಿಯನ್ನು ತೋಡಿ, ಕಟ್ಟಿಗೆಯ ತುಂಡು, ಎಲೆಗಳನ್ನು ಹಾಸಿ ಮಲಮೂತ್ರಗಳನ್ನು ವಿಸರ್ಜಿಸಬೇಕು. ಬರಿಯ ನೆಲದ ಮೇಲಲ್ಲ) ಹುತ್ತದ ಮೇಲೆ, ಹುತ್ತದ ಬಳಿ, ಬಾವಿಯ ಬಳಿ, ಹಾಳು ಬಾವಿಯಲ್ಲಿ, ಜನರು ವಿಶ್ರಾಂತಿ ತೆಗೆದುಕೊಳ್ಳುವ ಮರಗಳ ನೆರಳಿನಲ್ಲಿ, ದಾರಿಯಲ್ಲಿ, ನದೀ ಸರೋವರಗಳ ತೀರದಲ್ಲಿ ಸರ್ವಥಾ ಮಲಮೂತ್ರವಿಸರ್ಜನೆ ಮಾಡಬಾರದು.

## ಮಲವಿಸರ್ಜನೆಯ ಕ್ರಮ

ಒಂದು ಸಣ್ಣ ಗುಂಡಿಯನ್ನು ತೋಡಿ, ಅದರ ಮೇಲೆ ಕಾಡುಮರಗಳ ಕಟ್ಟಿಗೆಯ ತುಂಡುಗಳನ್ನು ಅಥವಾ ಒಣಗಿದ ಎಲೆಗಳನ್ನು ಹಾಕಿ, ಅಲ್ಲಿ ಮಲವಿಸರ್ಜನೆ ಮಾಡಿ ಬಳಿಕ ಮಣ್ಣಿನಿಂದ ಆ ಗುಂಡಿಯನ್ನು ಮುಚ್ಚಬೇಕು. ಓದುವವರಿಗೆ ನಗು ಬರುತ್ತಿದ್ದರೆ ಮುಂದೆ ಓದಿ.

ಗುಂಡಿಯನ್ನು ತೋಡಿ ಹೆಣವನ್ನು ಹೂತರೇ ಅದು ಭೂಮಿಯೊಂದಿಗೆ ಸೇರಿಬಿಡುತ್ತದೆ. ಅಂತಹುದರಲ್ಲಿ ಮಲವನ್ನು ಗುಂಡಿ ತೋಡಿ ಮುಚ್ಚಿಟ್ಟರೆ ಅದು ಗೊಬ್ಬರವಾಗುತ್ತದೆ. ಭೂಮಿ ಫಲವತ್ತಾಗಿ ಬೆಳೆಯಲು ಅನುಕೂಲವಾಗುತ್ತದೆ.

**ಬಯಲಿನಲ್ಲಿ ಮಲವಿಸರ್ಜನೆಯಿಂದ ಉಂಟಾಗುವ ದೊಡ್ಡ ಸಮಸ್ಯೆ ದುರ್ವಾಸನೆ ಮತ್ತು ಅಸಹ್ಯ. ಅದಕ್ಕಾಗಿಯೇ ಪ್ರತ್ಯೇಕ ಸ್ಥಳವಿದ್ದಾಗ, ಸಣ್ಣ ಗುಂಡಿಯನ್ನು ತೋಡಿ ಮಲವನ್ನು ಮುಚ್ಚಿ ಹಾಕಿದಾಗ ಅಸಹ್ಯದ ಸಮಸ್ಯೆಯೂ ಇಲ್ಲ, ವಾಸನೆಯ ಸಮಸ್ಯೆಯೂ ಇಲ್ಲ. ನೊಣಗಳ ಕಾಟವೂ ಇಲ್ಲ.**

ಆ ಶೌಚದ ಪ್ರದೇಶ ಊರಿನವರಿಂದ ಕಡ್ಡಾಯವಾಗಿ ಸ್ವಚ್ಛವಾಗುತ್ತಿತ್ತು. ಶೇಖರಣೆಯಾಗುತ್ತಿದ್ದ ಗೊಬ್ಬರವನ್ನು ಹೊಲಗಳಿಗೆ ವರ್ಗಾಯಿಸಲಾಗುತ್ತಿತ್ತು. ಯಾರು ಬೇಕಾದರೂ ಅದನ್ನು ತಮ್ಮ ಹೊಲಗಳಿಗೆ ಊಡಿಸಿಕೊಳ್ಳಬಹುದು. ಊಡಿಸಿಕೊಂಡವರಿಗೆ ಸಮೃದ್ಧ ಗೊಬ್ಬರ, ಊಡಿಸಿಕೊಂಡದ್ದರಿಂದ ಆ ಪ್ರದೇಶ ನಿಯಮಿತವಾಗಿ ಸ್ವಚ್ಛ!

ನಮ್ಮ ದೇಹದ ಮಲದಲ್ಲಿ ಭೂಮಿಗೆ ಬೇಕಾದ ಪೌಷ್ಟಿಕಾಂಶಗಳು ತುಂಬಿವೆ ಎಂದು ಇವತ್ತಿನ ವಿಜ್ಞಾನ ಸಾಬೀತುಪಡಿಸಿದೆ.  ಜಗತ್ತಿನ ಅನೇಕ ಪ್ರದೇಶಗಳಲ್ಲಿ "Dont waste your waste" ಎಂಬ ಅಭಿಯಾನ ಆರಂಭವಾಗಿದೆ. Human waste managment ಬಗ್ಗೆ ದೊಡ್ಡದೊಡ್ಡ ವಿಜ್ಞಾನಿಗಳು ತಲೆಕೆಡಿಸಿಕೊಂಡು ಅಧ್ಯಯನ ಮಾಡಿ ಸಲಹೆ ನೀಡುತ್ತಿದ್ದಾರೆ.

ನಾವು ಆಹಾರವನ್ನು ಸ್ವೀಕರಿಸುತ್ತೇವೆ.  ದೇಹಕ್ಕೆ ಎಷ್ಟು ಶಕ್ತಿ ಬೇಕೋ ಅಷ್ಟನ್ನು ಉಪಯೋಗಿಸಿಕೊಂಡು ಅಧಿಕವಾದದ್ದನ್ನು ದೇಹ ಹೊರ ಹಾಕುತ್ತದೆ. ಅದೇ ಮಲ. ಭೂಮಿಯಿಂದ ಬಂದ ಆಹಾರ ಭೂಮಿಯನ್ನೇ ಸೇರಬೇಕು. ಮತ್ತೆ ಅದು ಗೊಬ್ಬರವಾಗಿ ನಿರ್ಮಾಣವಾಗಬೇಕು. ಆ ಗೊಬ್ಬರ ಮತ್ತೆ ಹೊಲವನ್ನು ಸೇರಬೇಕು. ನಮ್ಮ ಡೀವೀಜಿಯವರು ಹೇಳುವಂತೆ ಪಾಲು ಪೇಲಾದ ಬಳಿಕ ಮತ್ತೆ ಪಾಲಾಗಬೇಕು. **ಪಾಲೇನು ಪೇಲೇನು ಮಂಕುತಿಮ್ಮ!**

ಹೀಗೆ ಪ್ರತೀ ಗ್ರಾಮದ ನೈಋತ್ಯಭಾಗದಲ್ಲಿ ಮಲಮೂತ್ರವಿಸರ್ಜನೆಗೆ ಸ್ಥಳವಿರುತ್ತಿತ್ತು. ಒಂದು ಸಣ್ಣ ಗುಂಡಿಯನ್ನು ತೋಡಿ, ಅದರಲ್ಲಿ ಕಟ್ಟಿಗೆಯ ತುಂಡು ಅಥವಾ ಒಣಗಿದ ಎಲೆಗಳನ್ನು ಹಾಕಿ ಆ ನಂತರ ಮಲಮೂತ್ರವಿಸರ್ಜನೆ. ಮಲದೊಂದಿಗೆ ಎಲೆ ಕಟ್ಟಿಗೆಗಳು ಸೇರಿದರೆ ಎರಡೂ ಪದಾರ್ಥಗಳೂ ಬೇಗನೇ ಗೊಬ್ಬರವಾಗುತ್ತವೆ. ಮೂರ್ನಾಲ್ಕು ದಿವಸಗಳಲ್ಲಿ ಆ ಮಲ ಪೂರ್ಣವಾಗಿ ದುರ್ವಾಸನೆ, ಅಸಹ್ಯತೆಯನ್ನು ಕಳೆದುಕೊಂಡು ಬಿಟ್ಟು ಮಣ್ಣಿನ ಹೆಂಟೆಯಂತಾಗಿಬಿಡುತ್ತದೆ. ಆ ನಂತರ ಅದು ಗೊಬ್ಬರ. ಪ್ರತಿಯೊಬ್ಬರ ಹೊಲಕ್ಕೂ ಅತ್ಯಾವಶ್ಯಕವಾದ ಗೊಬ್ಬರ. ರೈತರು ಅದನ್ನು ತಮ್ಮ ಹೊಲಕ್ಕೆ ವರ್ಗಾಯಿಸುತ್ತಿದ್ದರು. ಹೀಗೆ ಆಯಾ ಊರಿನ ಮಲ ಆಯಾಯ ಊರಿಗೆ ಗೊಬ್ಬರವಾಗುತ್ತಿತ್ತು.

ಇವತ್ತಿನ ನಾಗರೀಕತೆಯ ಪರಿಣಾಮ ಬೆಂಗಳೂರಿನ ಮಲವೆಲ್ಲ ವೃಷಭಾವತಿಗೆ, ಆ ನಂತರ ಅರ್ಕಾವತಿಗೆ ಆ ನಂತರ ಕಾವೇರಿಗೆ. ಇವತ್ತು ವೃಷಭಾವತಿ ಅರ್ಕಾವತಿಗಳು ಚರಂಡಿಯೇ ಆಗಿಬಿಟ್ಟಿವೆ. ಕಾವೇರಿ ಚರಂಡಿಯ

ಹರಿವಾಗುವ ಕಾಲ ದೂರವಿಲ್ಲ. ದಿಲ್ಲಿಯ ಮಲವನ್ನೆಲ್ಲ ಹೊತ್ತು ಯಮುನೆ ಚರಂಡಿಯಾಗಿರುವದು ಕಣ್ಣಮುಂದೆಯೇ ಇದೆಯಲ್ಲ.

**ಸರಿಯಾಗಿ ಮಲಮೂತ್ರ ವಿಸರ್ಜನೆಯನ್ನೂ ಮಾಡದೇ ಪ್ರಕೃತಿಯನ್ನೇ ಹಾಳು ಮಾಡುತ್ತಿರುವ ಇಂದಿನ ನಾಗರೀಕರೆಲ್ಲಿ? ಪ್ರತಿಯೊಂದು ವಸ್ತುವಿನಲ್ಲಿಯೂ ಗುಣಾಂಶಗಳನ್ನು ಕಂಡು ಪ್ರಕೃತಿಸಹಜವಾಗಿ ಬದುಕುತ್ತಿದ್ದ ನಮ್ಮ ಪ್ರಾಚೀನರೆಲ್ಲಿ ?**

ನಮ್ಮ ಪ್ರಾಚೀನರ ದೂರದೃಷ್ಟಿಯನ್ನು ಕಾಣದೇ ಅವರನ್ನು ನಿಂದೆ ಮಾಡುವದರಲ್ಲಿಯೇ ಇಂದಿನ ಜನ ಕಾಲ ಕಳೆಯುತ್ತಿದ್ದಾರೆ, ಜೊತೆಯಲ್ಲಿ ತಮ್ಮ ದಿವ್ಯ ನಾಗರೀಕತೆಯಿಂದ ಪ್ರಕೃತಿಯನ್ನೇ ಹಾಳುಗೆಡಹುತ್ತಿದ್ದಾರೆ.

ಇದೆಲ್ಲ ಸರಿ, ಬಯಲಶೌಚದಲ್ಲಿ ಮಾನ ಮುಚ್ಚಿಕೊಳ್ಳುವ ಬಗೆ ಹೇಗೆ. ಬಯಲಿನಲ್ಲಿ ಬತ್ತಲೆಯಾಗಿ ಕೂಡುವದು ಅಸಹ್ಯವಲ್ಲವೇ?

ನಮ್ಮ ಪ್ರಾಚೀನರ ಬದುಕಿನ ಪದ್ಧತಿಯನ್ನು ಅಳವಡಿಸಿಕೊಂಡಲ್ಲಿ ನಮ್ಮ ಮಲಮೂತ್ರವಿಸರ್ಜನೆಯ ಸಮಯ ಸಹ ನಿಯಮಿತವಾಗಿರುತ್ತದೆ. ನಮ್ಮ ಪ್ರಾಚೀನ ಋಷಿಮುನಿಗಳು ತಿಳಿಸಿದಂತೆ ದಂತಧಾವನವನ್ನು ಮಾಡಿದರೆ ಎರಡು ಮೂರು ದಿವಸಗಳು ಹಲ್ಲುಜ್ಜದೇ ಇದ್ದರೂ ಸಹ ಬಾಯಲ್ಲಿ ದುರ್ವಾಸನೆ ಮೂಡುವದಿಲ್ಲ. ಅಷ್ಟು ಅದ್ಭುತ ಸಂವಿಧಾನ ನಮ್ಮ ಧರ್ಮಶಾಸ್ತ್ರಗಳದು.

ಇನ್ನು, ಮಲಮೂತ್ರವಿಸರ್ಜನೆ ಆರೋಗ್ಯದ ದೃಷ್ಟಿಯಿಂದ ಅತ್ಯಂತ ಮಹತ್ತ್ವದ್ದು. ಸರಿಯಾಗಿ ಮಲಮೂತ್ರಗಳ ವಿಸರ್ಜನೆಯಾಗುತ್ತಿದ್ದರೆ ಯಾವುದೇ ರೀತಿಯ ಖಾಯಿಲೆಯಿಲ್ಲ ಎಂದರ್ಥ. ಮಲಮೂತ್ರವಿಸರ್ಜನೆಯಲ್ಲಿ ತೊಂದರೆ ಕಾಣಿಸಿಕೊಂಡರೆ ಖಾಯಿಲೆ ಆರಂಭವಾಗಿದೆ ಎಂದೇ ಅರ್ಥ.

ಹೀಗಾಗಿ, ಸೂರ್ಯೋದಯಕ್ಕಿಂತ ಮುಂಚೆ ಒಮ್ಮೆ, ಸೂರ್ಯಾಸ್ತದ ನಂತರ ಒಮ್ಮೆ ಮಲವಿಸರ್ಜನೆಯಾದರೆ ಆ ಮನುಷ್ಯ ಪರಿಪೂರ್ಣ

ಆರೋಗ್ಯಶಾಲಿ ಎಂದೇ ಅರ್ಥ. ನಮ್ಮ ಪ್ರಾಚೀನರಿಗೆ ಆರೋಗ್ಯ ಇಷ್ಟು ದೃಢವಾಗಿತ್ತಲ್ಲ, ಅವರ ಮಲವಿಸರ್ಜನೆಯ ಸಮಯ ಸಹಿತ ನಿಯಮಿತವಾಗಿ ಇರುತ್ತಿತ್ತು.
ಹೀಗಾಗಿ ಕತ್ತಲೆಯ ಸಮಯದಲ್ಲಿ ಮಲವಿಸರ್ಜನೆ ಮಾಡುವಾಗ ಮತ್ತೊಬ್ಬರಿಗೆ ಕಾಣಿಸಿಕೊಳ್ಳುವ ಪ್ರಸಕ್ತಿಯೇ ಇರುತ್ತಿರಲಿಲ್ಲ. ಮತ್ತು, ಮತ್ತೊಬ್ಬರು ಮಲವಿಸರ್ಜನೆಗಾಗಿ ಹೋಗಿದ್ದಾಗ ಆ ಪ್ರದೇಶಕ್ಕೆ ಹೋಗಬಾರದು ಎನ್ನುವ ನಿಯಮವನ್ನು ಧರ್ಮಶಾಸ್ತ್ರಗಳೇ ಹಾಕಿವೆ.

ಇನ್ನು ಹಗಲಿನ ಸಮಯದಲ್ಲಿ ಮಲವಿಸರ್ಜನೆಯ ಅನಿವಾರ್ಯತೆ ಒದಗಿದಾಗ ಮನೆಯಿಂದ ಹೊರಗೆ ಕಟ್ಟಿಕೊಂಡಿರುವ ಶೌಚಾಲಯಗಳು ಇದ್ದೇ ಇರುತ್ತವೆ. ಹೆಣ್ಣುಮಕ್ಕಳು, ಮಕ್ಕಳು, ರೋಗಿಗಳು, ವೃದ್ಧರು, ಅಶಕ್ತರು ಅವಶ್ಯವಾಗಿ ಮನೆಯ ಬಳಿಯಿರುತ್ತಿದ್ದ ಶೌಚಾಲಯಗಳನ್ನು ಉಪಯೋಗಿಸುತ್ತಿದ್ದರು.

## ಮನೆಯ ನೈಋತ್ಯದಲ್ಲಿ ಶೌಚಾಲಯವಿರಬಾರದು

ಊರಿನ ನೈಋತ್ಯದಲ್ಲಿ ಶೌಚಕ್ಕಾಗಿ ಪ್ರದೇಶವಿರಬೇಕು. ಆದರೆ ಮನೆಯ ನೈಋತ್ಯದಲ್ಲಿ ಶೌಚಾಲಯ ಕಟ್ಟಿಸಬಾರದು.

ನೈಋತ್ಯದಿಕ್ಕಿಗೆ ಒಂದು ಗುಣವಿದೆ. ಅಲ್ಲಿ ಪದಾರ್ಥವನ್ನು ಶೇಖರಿಸಲು ಆರಂಭಸಿದರೆ ಅದು ಖಾಲಿಯಾಗುವದೇ ಇಲ್ಲ. ತೆಗೆದರೆ ಮತ್ತೊಂದಷ್ಟು ಪದಾರ್ಥ ಬಂದು ಸೇರುತ್ತದೆ. ಊರಿನ ನೈಋತ್ಯದಲ್ಲಿ ಮಲವಿಸರ್ಜನೆಗೆ ಸ್ಥಳವಿರಬೇಕು ಎಂದು ಹೇಳಿದ ನಮ್ಮ ಪ್ರಾಚೀನರ ವಾಸ್ತುಪ್ರಜ್ಞೆಯೂ ಎತ್ತರ ಮಟ್ಟದ್ದು. ಅಲ್ಲಿ ಗೊಬ್ಬರದ ನಿರ್ಮಾಣ ನಿರಂತರ ನಡೆಯುತ್ತಿರಬೇಕು. ಒಂದು ಗ್ರಾಮದಲ್ಲಿ ಐವತ್ತು ಮನೆಯಿದೆ ಎಂದರೆ ಕನಿಷ್ಠ ಐನೂರು ಎಕರೆ ಜಮೀನಿರುತ್ತದೆ. ಅಷ್ಟಕ್ಕೆ ನಿರಂತರವಾಗಿ ಈ ಮನುಷ್ಯಗೊಬ್ಬರವೂ ಬೀಳಬೇಕು. ಕೊಟ್ಟಿಗೆಯ ಗೊಬ್ಬರ, ದಾರಿಯಲ್ಲಿನ ಕುರಿ, ಮೇಕೆಗಳ ಹಿಕ್ಕೆಗಳು, ಮನುಷ್ಯಮಲ, ಮತ್ತು ಹಸಿರುಗೊಬ್ಬರ ಇಷ್ಟು ಸೇರಿದರೆ ಯಾವ ರಾಸಾಯನಿಕದ ಆವಶ್ಯಕತೆಯೇ ಭೂಮಿಗೆ

ಇರುತ್ತಿರಲಿಲ್ಲ. ಹೀಗಾಗಿ ಹಿಂದಿನವರ ಬೆಳೆಯೂ ಸಮೃದ್ಧವಾಗಿ ಇರುತ್ತಿತ್ತು.

ಮನೆಯಲ್ಲಿ ಶೌಚಾಲಯ ಕಟ್ಟಬೇಕಾದರೆ ನೈಋತ್ಯದಲ್ಲಿ ಕಟ್ಟಬಾರದು. ಕಾರಣ ನೈಋತ್ಯದಲ್ಲಿ ಹಳ್ಳ ಇರಲೇ ಬಾರದು. ಶೌಚಾಲಯ ಕಟ್ಟಬೇಕಾದರೆ ಮಲದ ಶೇಖರಣೆಗೆ ಗುಂಡಿಯ ಅನಿವಾರ್ಯತೆ ಇದೆ. ಹೀಗಾಗಿ ಉತ್ತರ ವಾಯವ್ಯ ಅಥವಾ ಉತ್ತರ ದಿಕ್ಕಿನಲ್ಲಿ ಗುಂಡಿಯನ್ನು ತೋಡಿ ಅಲ್ಲಿ ಮಲಶೇಖರಣೆಯ ಗುಂಡಿಯನ್ನು (Septic Tank) ನಿರ್ಮಾಣ ಮಾಡಬೇಕು. ದಕ್ಷಿಣ, ಪಶ್ಚಿಮ ಮತ್ತು ಪಶ್ಚಿಮವಾಯವ್ಯಗಳಲ್ಲಿ ಯಾವುದೇ ಕಾರಣಕ್ಕೂ ಗುಂಡಿಯನ್ನು ತೋಡಿಸಬಾರದು.

ಭೂಮಿಯಲ್ಲಿ ಸಹಜವಾಗಿ ಶೋಧಕತ್ವದ ಗುಣವಿದೆ. ಗುಂಡಿಗೆ ಸೇರುವ ಮಲದೊಂದಿಗೆ ಮೃತ್ತಿಕಾಶೌಚದ ಮಣ್ಣೂ ಸಹ ಸೇರುತ್ತದೆ. ಹೀಗಾಗಿ ಅದೂ ಸಹ ಕಾಲಾಂತರದಲ್ಲಿ ಗೊಬ್ಬರವಾಗಿಬಿಡುತ್ತದೆ. ಆ ನಂತರ ಹೊಲಕ್ಕೆ ವರ್ಗಾಯಿಸಬೇಕು.

ನಮ್ಮ ಪ್ರಾಚೀನರು ಹೇಳಿಕೊಟ್ಟ ಬಯಲಶೌಚ ನಿಯಮಬದ್ಧವಾದದ್ದು. ಪ್ರಕೃತಿಗೆ ಆಪ್ಯಾಯಮಾನವಾದದ್ದು. ಮನೆಯ ಪ್ರಾಂಗಣದಲ್ಲಿ ಶೌಚಾಲಯ ಕಟ್ಟಿದರೂ ಗುಂಡಿಯನ್ನು ತೋಡಿಯೇ ಕಟ್ಟಬೇಕು.

ಇವತ್ತಿನ  ಹಳ್ಳಿಗರ ಬಯಲಶೌಚ ಹಾಸ್ಯಾಸ್ಪದ. ರೋಡಿನ ಇಕ್ಕೆಲಗಳಲ್ಲಿ, ಅಕ್ಕಪಕ್ಕದವರ ಮನೆಯ ಮುಂದೆ, ಸ್ಥಳ ಸಿಕ್ಕಲ್ಲಿ ಶೌಚ ಮಾಡುವದು ಅಸಹ್ಯವಷ್ಟೇ ಅಲ್ಲ ಅಪರಾಧ ಸಹಿತ.

ಇವತ್ತಿನ ನಾಗರೀಕರ ಒಳಚರಂಡಿಯ ಪರಿಕಲ್ಪನೆ ಪ್ರಕೃತಿಗೆ ಮಾರಕವಾದದ್ದು. ಎಲ್ಲ ನಗರಗಳೂ ತಮ್ಮಲ್ಲಿನ ಕೆರೆಗಳನ್ನು, ಸುತ್ತಮುತ್ತಲಿನ ನದಿಗಳನ್ನೂ ವಿನಾಶ ಮಾಡುತ್ತಿರುವದು ಕಣ್ಣಾರೆ ಕಾಣುತ್ತಿದ್ದೇವೆ. ಈಗಲಾದರೂ ಎಚ್ಚೆತ್ತು ಪಿಟ್ಟುಗಳನ್ನು ಜಾರಿಗೆ ತಂದರೆ ನಮ್ಮ ಮೊಮ್ಮಕ್ಕಳಿಗೆ ಕುಡಿಯಲು ನೀರಿರುತ್ತದೆ. ಇಲ್ಲದಿದ್ದರೆ ಈ ಮಲಮೂತ್ರಗಳ ಚರಂಡಿಯ ನೀರನ್ನೇ Recycle ಮಾಡಿ ಕುಡಿಯುವ ಅನಿವಾರ್ಯತೆ ಬಂದೊದಗುತ್ತದೆ.

ನಾಗರೀಕತೆಯ ಹೆಸರಿನಲ್ಲಿ ತಿನ್ನುವ ಅನ್ನ, ಕುಡಿಯುವ ನೀರಿಗೇ ಸಂಚಕಾರ ತಂದುಕೊಳ್ಳುವದು ಬೇಡ. ಎಚ್ಚೆತ್ತು ಮುಂದುವರೆಯೋಣ.

ಈ ಲೇಖನವನ್ನು ಓದಿದ ಪ್ರತಿಯೊಬ್ಬರಲ್ಲಿ ವಿನಂತಿಸುತ್ತೇನೆ, ಮನೆಯನ್ನು ಕಟ್ಟುವಾಗ ಪ್ರತ್ಯೇಕವಾದ ಪಿಟ್ಟನ್ನು ಕಟ್ಟಿಸಿ. ಒಳಚರಂಡಿಯನ್ನು ಉಪಯೋಗಿಸಬೇಡಿ. ಕೆರೆ ನದಿಗಳನ್ನು ಉಳಿಸಿ, ನಿಮ್ಮ ಮೊಮ್ಮಕ್ಕಳಿಗೆ ಕುಡಿಯಲು ನೀರು ಉಳಿಸಿ.

ಶ್ರೀಮದಾಚಾರ್ಯರು ಮಲಮೂತ್ರವಿಸರ್ಜನೆಯ ಕುರಿತು ಹೀಗೆ ಆದೇಶವನ್ನು ನೀಡುತ್ತಾರೆ — **"ಕೃತಶೌಚೋ ಯಥಾವಿಧಿ"** ಪ್ರಾಚೀನ ಋಷಿಮುನಿಗಳು ಮಲಮೂತ್ರವಿಸರ್ಜನೆಯ ವಿಷಯದಲ್ಲಿ ಯಾವ ವಿಧಿಗಳನ್ನು ಮಾಡಿದ್ದಾರೆಯೋ ಅವನ್ನು ದಾಟಬೇಡಿ, ಆ ನಿಯಮಗಳಂತೆಯೇ  ಶೌಚವನ್ನಾಚರಿಸಿ ಎಂದು.

ಆ ಋಷಿಮುನಿಗಳ ಆದೇಶವನ್ನು ಮೀರಿದ್ದಕ್ಕಾಗಿ ಗಂಗೆಯಿಂದ ಆರಂಭಿಸಿ ನಮ್ಮ ವೃಷಭಾವತಿಯ

ವರೆಗಿನ ಎಲ್ಲ ನದಿಗಳು ತೊರೆಗಳು ಕೆರೆಗಳು ಈಗಾಗಲೇ ಕಲುಷಿತವಾಗಿಬಿಟ್ಟಿವೆ.

ನಮ್ಮ ಬದುಕಿನ ಮೂಲವಾದ ನೀರನ್ನೇ ವಿನಾಶ ಮಾಡಿಕೊಂಡು ಬಿಟ್ಟಲ್ಲಿ ಮುಂದೆ ಜೀವಸಂಕುಲ ಉಳಿಯಲು ಹೇಗೆ ಸಾಧ್ಯ, ಕಲುಷಿತ ನೀರನ್ನು ಸೇವಿಸಿ ಉಳಿದರೂ ಆರೋಗ್ಯವಂತವಾಗಿ ಉಳಿಯಲು ಸಾಧ್ಯವೇ?[2]

ಯೋಚನೆ ಮಾಡಿ.

— ವಿಷ್ಣುದಾಸ ನಾಗೇಂದ್ರಾಚಾರ್ಯ

---

[2] ಈ ವಿಷಯದ ಕುರಿತ ಉಪನ್ಯಾಸವೂ ಇದೆ. VNU359. ತಪ್ಪದೇ ಕೇಳಿ.

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಿಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491